201 (427) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿರುವ ಒಟ್ಟು ಪಟ್ಟಣ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ಹಣವೆಷ್ಟು?

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ಎಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

1) 98(2 ಅಧಿಸೂಚಿತ ಪ್ರದೇಶಗಳನ್ನು ಸೇರಿದಂತೆ); ಈ ಪಟ್ಟಣ ಪಂಚಾಯತ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ರೂ. 21,38,55,917 ಗಳನ್ನು ನಿಗದಿಪಡಿಸಲಾಗಿದೆ.

2) ಕುಂದಗೋಳ ತಾಲ್ಲೂಕು ಪಟ್ಟಣ ಪಂಚಾಯತಿಗೆ 2001 ರಿಂದ 2004 ರವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತ ರೂ. 64,86,897.

ಧಾರವಾಡ ಜಿಲ್ಲೆಯಲ್ಲಿಯ ಮುನ್ಸಿಫ್ ಕೋರ್ಟ್‌ಗಳು

202 (430) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಮುನ್ಸಿಫ್ ನ್ಯಾಯಾಲಯಗಳು ಇವೆ. ಎಷ್ಟು ನ್ಯಾಯಾಲಯಗಳು ಸ್ವಂತ ಕಟ್ಟಡಗಳು ಹೊಂದಿರುವುದಿಲ್ಲ. ಅಂತಹ ನ್ಯಾಯಾಲಯಗಳಿಗೆ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ.

ಆ) ಕುಂದಗೋಳ ಮುನ್ಸಿಫ್ ಕೋರ್ಟ್ ಕಟ್ಟಡ ದುರಸ್ಥಿಯಲ್ಲಿದ್ದು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅವುಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 15 ನ್ಯಾಯಲಯಗಳಿವೆ. ಕಲ್ಲಘಟಗಿಯಲ್ಲಿರುವ ಜೆ.ಎಂ.ಎಫ್.ಸಿ. (ಕಿರಿಯ ವಿಭಾಗ) ದ ಕೋರ್ಟ್‌ಗೆ ಸ್ವಂತ ಕಟ್ಟಡ ಇರುವುದಿಲ್ಲ. ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಆ) ಹೌದು. ಕುಂದಗೋಳದಲ್ಲಿರುವ ಕೋರ್ಟ್ ಕಟ್ಟಡ ಶಿಥಿಲಾವಸ್ಥೆಯಲ್ಲಿದೆ. ಸದರಿ ಕೋರ್ಟ್‌ನ್ನು ದುಂದಗೋಳದಲ್ಲಿರುವ ನ್ಯಾಯಾಧೀಶರ ವಸತಿ ಗೃಹಕ್ಕೆ ಬದಲಾಯಿಸಲಾಗಿದ್ದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ವರದಿಯ ಮೇರೆಗೆ ಹಾಲಿ ನ್ಯಾಯಾಲಯ ಕಟ್ಟಡವನ್ನು ರಿಪೇರಿ ಮಾಡಲು ಸಾಧ್ಯವಿಲ್ಲ. ಹಾಲಿ ನ್ಯಾಯಾಲಯ ಕಟ್ಟಡವನ್ನು ಕೆಡವಿ ಅದೇ ಸ್ಥಳದಲ್ಲಿ ನೂತನ ನ್ಯಾಯಾಲಯ ಕಟ್ಟಡವನ್ನು ಕಟ್ಟಲು ಯೋಜಿಸಲಾಗಿದ್ದು. ಈ ಬಗ್ಗೆ ಮುಂದಿನ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಯನ್ನು ಸೇರಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

203 (618) : ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿಗಳು ಯಾವ ವರ್ಷದಿಂದ ಪ್ರಾರಂಭವಾಗಿವೆ?

ಆ) ಯಾವ ವರ್ಷಕ್ಕೆ ಮುಗಿಸಲು ಸರ್ಕಾರದ ತೀರ್ಮಾನವಾಗಿತ್ತು.

ಇ) ಕಾಮಗಾರಿ ಎಲ್ಲಿಯವರೆಗೆ ಪೂರ್ಣಗೊಂಡಿದೆ;

ಈ) ಇನ್ನೂ ಎಷ್ಟು ಕಿ.ಮೀ. ಉದ್ದದ ಕಾಮಗಾರಿ ಪೂರ್ಣಗೊಳ್ಳಬೇಕಾಗಿದೆ;

ಉ) ಪೂರ್ಣಗೊಳ್ಳದಿರಲು ಕಾರಣಗಳೇನು;

ಊ) ಸದರಿ ಮುಖ್ಯ ಕಾಲುವೆ ಮತ್ತು ಡಿಸ್ಟ್ರಿಬ್ಯೂಟರಿ ಕಾಲುವೆ ದೇವದುರ್ಗ ತಾಲ್ಲೂಕಿಗೆ ಒಳಪಡುವ 42 ರಿಂದ 95ನೇ ಕಿ.ಮೀ. ಮತ್ತು 9 ರಿಂದ 18ರವರೆಗೆ ಗುತ್ತಿಗೆ ಪಡೆದ ಹಣಕ್ಕಿಂತ ಹೆಚ್ಚುವರಿಯಾಗಿ ಹಣ ಪಡೆದಿರುವುದು ನಿಜವೆ;

ಋ) ಹಾಗಿದ್ದಲ್ಲಿ, ಯಾವ ಯಾವ ಕಾರಣಕ್ಕೆ ಹೆಚ್ಚುವರಿಯಾಗಿ ಹಣವನ್ನು ಗುತ್ತಿಗೆದಾರರುಗಳಿಗೆ ನೀಡಲಾಗಿದೆ;

ಋೂ) ಮುಖ್ಯ ಕಾಲುವೆ ಮತ್ತು ಡಿಸ್ಟ್ರಿಬ್ಯೂಟರಿಗಳ ನಿರ್ಮಾಣದಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಏ) ಸದರಿ ಕಾಮಗಾರಿಗಳನ್ನು ಕ್ವಾಲಿಟಿ ಕಂಟ್ರೋಲ್‌ರವರಿಂದ ದೃಢೀಕರಣ ಪತ್ರ ಪಡೆಯಲಾಗಿದೆಯೇ;

ಐ) ಇಲ್ಲದಿದ್ದಲ್ಲಿ, ಕಾರಣವೇನು;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) 1995–96ನೇ ಸಾಲಿನಲ್ಲಿ ಪ್ರಾರಂಭವಾಗಿವೆ.

ಆ) ಕಾಮಗಾರಿಗಳನ್ನು 2003ನೇ ಸಾಲಿನಲ್ಲಿ ಪೂರ್ಣಗೊಳಿಸಲು ತೀರ್ಮಾನಿಸಲಾಗಿತ್ತು.

ಇ) ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಕಿ.ಮೀ.0.00 ರಿಂದ 0.95, ವಿತರಣಾ ಕಾಲುವೆ ಸಂಖ್ಯೆ 1 ರಿಂದ 14, ಲ್ಯಾಟರಲ್ ಸಹಿತ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ವಿತರಣಾ ಕಾಲುವೆ ಸಂಖ್ಯೆ 15,16, 17 ಮತ್ತು 18ರ ಕಾಮಗಾರಿಗಳು ಕೂಡ ಭಾಗಶಹ ಪೂರ್ಣಗೊಂಡಿದ್ದು ಅವುಗಳ ಅಡಿಯಲ್ಲಿ ಬರುವ ಕೆಲವು ಪಾರ್ಶ್ವ ಕಾಲುವೆ, ಲ್ಯಾಟರಲ್ ಹಾಗೂ ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ) ಮುಖ್ಯವಾಗಿ ವಿತರಣಾ ಕಾಲುವೆ 15 ರಿಂದ 18ರಡಿಯ ಉಪ ವಿತರಣಾ ಕಾಲುವೆ, ಲ್ಯಾಟರಲ್ ಹಾಗೂ ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಳಿಸಬೇಕಾಗಿರುತ್ತವೆ.

ಉ) ಕಾಮಗಾರಿಗಳು ಪೂರ್ಣಗೊಳ್ಳದೇ ಇರುವುದಕ್ಕೆ ಈ ಕೆಳಗಿನ ನಮೂದಿಸಿದ ಕಾರಣಗಳು ಇರುತ್ತವೆ:

1. ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವ ಜಮೀನುಗಳಲ್ಲಿ ಬೆಳೆಗಳು ಇದ್ದ ಪ್ರಯುಕ್ತ ಸಂಬಂಧಿಸಿದ ಜಮೀನುದಾರರುಗಳಿಂದ ಕಾಮಗಾರಿಗಳ ನಿರ್ಮಾಣಕ್ಕೆ ತಡೆ ಉಂಟಾಗಿರುವುದರಿಂದ.
2. ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಗುತ್ತಿಗೆ ಒಪ್ಪಂದ ಮಾಡಿಕೊಳ್ಳದಿರುವುದರಿಂದ ಅಂತಹ ಕೆಲಸಗಳನ್ನು ನಿಯಮಾವಳಿಗಳ ಪ್ರಕಾರ ರದ್ದು ಮಾಡಿ ಮರುಟೆಂಡರ್ ಕರೆದು ಕೈಗೆತ್ತಿಕೊಳ್ಳಲಾಗಿರುವುದರಿಂದ.

3. ಕಾಲುವೆಗಳ ನಿರ್ಮಾಣ ಹಂತದಲ್ಲಿ ಸ್ಥಳೀಯ ಅವಶ್ಯಕತೆಗನುಗುಣವಾಗಿ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು ಹೆಚ್ಚಿನ ಕಾಲಾವಕಾಶ ಬೇಕಾಗಿರುವುದು. ಮುಂತಾದವುಗಳು.

ಊ) ನಿಜ.

ಋ) ಕಾಮಗಾರಿಗಳ ನಿರ್ವಹಣೆ ಹಂತದಲ್ಲಿ ಈ ಕೆಳಕಂಡ ಕಾರಣಗಳಿಂದಾಗಿ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಹಣವನ್ನು ನೀಡಲಾಗಿರುತ್ತದೆ.

1. ಕೆಲವು ಹೆಚ್ಚುವರಿ ಸಿ, ಡಿ (ಅಡ್ಡಮೋಡಿಗಳು)ನ ಕಾಮಗಾರಿಗಳ ನಿರ್ಮಾಣದ ಅವಶ್ಯಕತೆ ಇರುವುದರಿಂದ.

2. ನಿರ್ಮಾಣದ ಹಂತದಲ್ಲಿ ಪದರುಗಳ ವರ್ಗೀಕರಣದಲ್ಲಿನ ವ್ಯತ್ಯಾಸದಿಂದಾಗಿ, ತಾಂತ್ರಿಕ ಹಾಗೂ ಸ್ಥಳೀಯ ಅವಶ್ಯಕತೆಗನುಗುಣವಾಗಿ ಕಾಮಗಾರಿಗಳ ವಿನ್ಯಾಸಗಳಲ್ಲಿ ಮಾಡಬೇಕಾಗಿರುವ ಮಾರ್ಪಾಡಿನಿಂದಾಗಿ.

3. ಅಗೆದ ಮಣ್ಣಿನ ಗುಣಮಟ್ಟ ಅಸಮರ್ಪಕ ಎನಿಸದಲ್ಲಿ ಕ್ವಾರಿಯಿಂದ ಮುರಮ್ ಅನ್ನು ತಂದು ಏರಿ ನಿರ್ಮಾಣ ಮಾಡಬೇಕಾಗಿರುವುದರಿಂದ, ಮುಂತಾದ ಇತರೆ ತಾಂತ್ರಿಕ ಕಾರಣಗಳಿಂದಾಗಿ.

ಋ) ಎ) ಐ) ಮತ್ತು ಐ) ಕೆಲವು ಸಂದರ್ಭಗಳಲ್ಲಿ ಕಾಲುವೆಗಳ ನಿರ್ಮಾಣದ ಕುರಿತು ರೈತರಿಂದ, ಜನಪ್ರತಿನಿಧಿಗಳಿಂದ ಹಾಗೂ ಪತ್ರಿಕೆಗಳ ಮುಖಾಂತರ ದೂರುಗಳು ಬಂದಿರುತ್ತವೆ. ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 72 ರಿಂದ 95 ಹಾಗೂ ವಿತರಣಾ ಕಾಲುವೆ 9 ರಿಂದ 18 ರಡಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆ ಮಾಡಲು ಸರ್ಕಾರವು ಶ್ರಿ .ಎಸ್.ಎಸ್. ಮಗದಾಲ್, ಶ್ರೀ ಎಂ.ಎಸ್. ವಡಕಣ್ಣವರ್ ಮತ್ತು ಶ್ರೀ ಶ್ರೀರಾಮಯ್ಯ ತ್ರಿಸದಸ್ಯರ ಸಮಿತಿಯೊಂದನ್ನು ರಚಿಸಿದ್ದು, ಸದರಿ ಸಮಿತಿಯು ತನಿಖೆಯ ನಂತರ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸಮಿತಿಯು ತನ್ನ ವರದಿಯಲ್ಲಿ ಕೆಲವು ಕಾಮಗಾರಿ ನಿರ್ವಹಣೆಯಲ್ಲಿ ಕಂಡು ಬಂದಂತಹ ಸಣ್ಣ ಲೋಪದೋಷಗಳನ್ನು ಹಾಗೂ ನ್ಯೂನತೆ/ದುರಸ್ತಿ ಕೆಲಸಗಳನ್ನು ಕಾಮಗಾರಿಗಳ ಅಂತಿಮಗೊಳಿಸುವಿಕೆ ಮುನ್ನವೇ ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತದೆ. ಒಟ್ಟಾರೆ ಸಮಿತಿಯು ಕಾಮಗಾರಿಯ ನಿರ್ವಹಣೆಯಲ್ಲಿ ಹಣ ದುರುಪಯೋಗವಾಗಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತದೆ. ಈ ನಿಟ್ಟಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

204 (622) : ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮಾಹಿತಿ ತಂತ್ರಜ್ಞಾನದ ಇಲಾಖೆಯಿಂದ ಯಾವ ಯಾವ ಯೋಜನೆಯಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ;

ಆ) ಅದರಲ್ಲಿ ಖರ್ಚಾದ ಮತ್ತು ಉಳಿದ ಹಣ ಎಷ್ಟು (ಯೋಜನೆವಾರು ವಿವರಗಳನ್ನು ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.